# <u>ಪತ್ರಿಕಾ ಪ್ರಕಟಣೆ</u>

ಸಾರ್ವಜನಿಕ ಶಿಕ್ಷಣ ಇಲಾಖೆಯ 2016–17ನೇ ಸಾಲಿನ, ಮೈಸೂರು ವಿಭಾಗದೊಳಗಿನ ಪ್ರೌಢಶಾಲಾ ಶಿಕ್ಷಕರ ಘಟಕದೊಳಗಿನ **"ಕೋರಿಕೆ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ"**ಯನ್ನು ದಿನಾಂಕ 08-09-2016 **ರಂದು** ಇಲಾಖೆಯ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕ ವೃಂದದವರಿಗೆ ದಿನಾಂಕ 20–09–2016 **ರಿಂದ** 23–09–2016 **ರವರೆಗೆ** ಕೌನ್ಸಿಲಿಂಗ್ ನಡೆಸಲಾಗುತ್ತದೆ. ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರ ವೃಂದದವರು ಈ ಕೆಳಕಂಡ ದಾಖಲೆಗಳೊಂದಿಗೆ ಕೌನ್ಸಿಲಿಂಗ್‌ಗೆ ಹಾಜರಾಗಲು ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರಾದ ಶ್ರೀ ಬಿ.ಕೆ. ಬಸವರಾಜ ಇವರು ತಿಳಿಸಿರುತ್ತಾರೆ.

1. **ಇತ್ತೀಚಿನ ಭಾವಚಿತ್ರ ಲಗತ್ತಿಸಿರುವ ಸೇವಾ ದೃಢೀಕರಣ ಪತ್ರ (ಎಲ್ಲಾ ಪ್ರಕರಣಗಳ ಶಿಕ್ಷಕರುಗಳಿಗೆ ಕಡ್ಡಾಯ)**
2. **ತೀವ್ರತರಹದ ಖಾಯಿಲೆ / ಅಂಗವಿಕಲ ಪ್ರಕರಣದವರು ಮೈಸೂರು ವಿಭಾಗದ ವೈದ್ಯಕೀಯ ಮಂಡಳಿಯಿಂದ ನೀಡಲಾದ ಮೂಲ ಪ್ರಮಾಣ ಪತ್ರ. ಹಾಗೂ ಅಂಗವಿಕಲ ಕೋಟಾದಡಿ ನೇಮಕಾತಿ ಹೊಂದಿದ್ದಲ್ಲಿ, ನೇಮಕಾತಿ ಆದೇಶದ ದೃಢೀಕೃತ ಜೆರಾಕ್ಸ್ ಪ್ರತಿ.**
3. **ಪತಿ ಮತ್ತು ಪತ್ನಿ ಪ್ರಕರಣದವರು ಪತಿ ಹೆಸರಿರುವ ಮೂಲ ಸೇವಾ ದೃಢೀಕರಣ ಪತ್ರ ಹಾಗೂ ಪತಿ ಅಥವಾ ಪತ್ನಿಯ ಸೇವಾ ಅವಧಿಯಲ್ಲಿ ಈ ಪ್ರಕರಣದಲ್ಲಿ ಎಷ್ಟನೇ ಬಾರಿ ವರ್ಗಾವಣೆ ಪಡೆಯುತ್ತಿದ್ದಾರೆ. ಈ ಬಗ್ಗೆ ದೃಢೀಕರಣ ಪತ್ರ.**
4. **ಪತಿ ಅಥವಾ ಪತ್ನಿ ಪ್ರಕರಣದವರು ಪತಿ ಅಥವಾ ಪತ್ನಿಯವರ ಮೂಲ ವಾಸ ಸ್ಥಳ ದೃಢೀಕರಣ ಪತ್ರ.**
5. **ವಿಧವಾ ಶಿಕ್ಷಕಿಯವರ ಪ್ರಕರಣದಲ್ಲಿ ಪತಿಯ ಹೆಸರಿರುವ ಮೂಲ ಮರಣ ಪ್ರಮಾಣ ಪತ್ರ ಅಥವಾ ಇತರೆ ಯಾವುದಾದರೂ ಒಂದು ದಾಖಲೆಯನ್ನು ಹಾಜರುಪಡಿಸುವುದು.**
6. **ಸೈನಿಕ ಪ್ರಕರಣದವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಮೂಲ ಪ್ರಮಾಣ ಪತ್ರ.**
7. **ವಿವಾಹಿತ ಶಿಕ್ಷಕರ ಪ್ರಕರಣದಲ್ಲಿ ಅಗತ್ಯ ಪ್ರಮಾಣ ಪತ್ರ ಸಲ್ಲಿಸಿ ಆದ್ಯತೆ ಕೋರತಕ್ಕದ್ದು. ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಪತಿ ಅಥವಾ ಪತ್ನಿ ಈ ಆದ್ಯತೆಯಡಿಯಲ್ಲಿ ಎಷ್ಟನೇ ಬಾರಿ ವರ್ಗಾವಣೆ ಪಡೆಯುತ್ತಿರುವುದು ಎಂಬ ಬಗ್ಗೆ ಮುಖ್ಯ ಶಿಕ್ಷಕರಿಂದ ಪಡೆದ ದೃಢೀಕರಣ ಪತ್ರ.**
8. **ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ವರ್ಗಾವಣೆ ಹೊಂದಿದ್ದಲ್ಲಿ, ಹಿಂದಿನ ಶಾಲೆಯಲ್ಲಿ ಮೂರು ವರ್ಷ ಸೇವೆ ಪೂರ್ಣಗೊಳಿಸಿದ ಬಗ್ಗೆ ಮುಖ್ಯ ಶಿಕ್ಷಕರಿಂದ ಪಡೆದ ಸೇವಾ ದೃಢೀಕರಣ ಪತ್ರ.**

(ಬಿ.ಕೆ. ಬಸವರಾಜ)

ವಿಭಾಗೀಯ ಕಾರ್ಯದರ್ಶಿಗಳು ಹಾಗೂ

ಪದನಿಮಿತ್ತ ಜಂಟಿನಿರ್ದೇಶಕರು,

ಸಾರ್ವಜನಿಕ ಶಿಕ್ಷಣ ಇಲಾಖೆ,

ಮೈಸೂರು ವಿಭಾಗ, ಮೈಸೂರು.